# NATIONAL PUBLIC SCHOOL

**KENGERI, BENGALURU**



## ಕನಕದಾಸ ಜಯಂತಿಯ ವರದಿ

**ಆತ್ಮ ಯಾವ ಕುಲ...? ಜೀವ ಯಾವ ಕುಲ...? ಕುಲ.. ಕುಲ... ಕುಲ..ಕುಲವೆನ್ನುತಿಹರು**
**ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ..? ತತ್ವೇಂದ್ರಿಯಗಳ ಕುಲ ಪೇಳಿರಯ್ಯ..?**
**ಆತ್ಮಾಂತರಾತ್ಮ ನೆಲೆಯಾದಿಕೇಶವ... ಆತನೊಲಿದ ಮೇಲೆ ಯಾತರಕುಲವಯ್ಯ..?**

೧೫ - ೧೬ ನೇ ಶತಮಾನದಲ್ಲಿ ಜಾತಿ ಮತ ಪಂಥಗಳು ಎಂಬ ತಾರತಮ್ಯ ಇದ್ದಂತಹ ಕಾಲದಲ್ಲಿ, ಕುಲ ಕುಲ ಕುಲವೆಂದು ಹೊಡೆದಾಡದಿರಿ .... ಎಂಬ ಸಂದೇಶದ ಮೂಲಕ ಸಮಾಜದಲ್ಲಿ ತಾರತಮ್ಯವನ್ನು ಹೋಗಲಾಡಿಸಲು ಸಾಹಿತ್ಯದ ಮೂಲಕ ಹೋರಾಡಿದ ಹರಿಭಕ್ತ ಶ್ರೀ ಕನಕದಾಸರು. ಇವರ ಸ್ಮರಣಾರ್ಥವಾಗಿ ನವೆಂಬರ್ 22ರಂದು ಕನಕದಾಸರ ಜಯಂತಿಯನ್ನು ಆಚರಿಸಲಾಗುತ್ತದೆ. 23- 11 -21 ರಂದು ಮೂರನೇ ತರಗತಿ ಎಲ್ಲಾ ವಿಭಾಗದ ಮಕ್ಕಳು ಕನಕದಾಸ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದರು.

ಕನಕದಾಸರ ಒಂದು ಕೀರ್ತನೆಗಳೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕನಕದಾಸರ ವೇಷಭೂಷಣಗಳೊಂದಿಗೆ ಸಿದ್ಧರಾಗಿದ್ದ ವಿದ್ಯಾರ್ಥಿಗಳು ಕನಕದಾಸರ ಪರಿಚಯವನ್ನು ಮಾಡಿಕೊಟ್ಟರು. ವಿದ್ಯಾರ್ಥಿಗಳು ಕನಕದಾಸ ಜಯಂತಿಯ ದಿನದ ಮಹತ್ವವನ್ನು ಪ್ರಸ್ತುತಪಡಿಸಿದರು. ವಿದ್ಯಾರ್ಥಿಗಳು ಕನಕದಾಸರ ಸಂದೇಶಗಳನ್ನು ಹೇಳಿದರು, ಕೀರ್ತನೆಗಳನ್ನು ಹಾಡಿದರು, ಕೊಳಲನ್ನು ನುಡಿಸಿ, ಎಲ್ಲರನ್ನೂ ರಂಜಿಸಿದರು. ತರಗತಿಯಲ್ಲಿ ಕನಕದಾಸರ ಕೃತಿಗಳು, ಅವರ ಸಾಮಾಜಿಕ ಕಳಕಳಿ, ಹರಿಭಕ್ತಿ, ಜನರಿಗೆ ನೀಡಿದ ಸಂದೇಶಗಳು ಮಕ್ಕಳಲ್ಲಿ ಸ್ಫೂರ್ತಿ ತುಂಬಿದವು.

ಈ ಕಾರ್ಯಕ್ರಮದಲ್ಲಿ ಕನಕದಾಸರ ಜೀವನದ ಬಗ್ಗೆ ಹಾಗೂ ಅವರ ಸಾಹಿತ್ಯದ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಪ್ರತಿ ದಿನ ಒಬ್ಬೊಬ್ಬರಿಗೆ ಕೀರ್ತನೆ ಹಾಡಲು ಅವಕಾಶ ನೀಡಲಾಯಿತು. ಕನಕದಾಸ ಜಯಂತಿಯ ಪ್ರಯುಕ್ತ ಏರ್ಪಡಿಸಿದ್ದ ಕಾರ್ಯಕ್ರಮಗಳು ಸುಂದರವಾಗಿ ಮೂಡಿ ಬಂದವು.


KANAKA KRISHNA H
SAANVI S
A DHANIKA PRIYA
PARJANYA SHISHIR BHAT
PAVANTEJ ACHAR M P
ARVIL MARIA LOBO
SAMANVI GIRISH
VIHAAN RAJ
RENUKA H
KRUTHIKA S R
ANVAY KULKARNI
VAISHNAVI N PRADEEP